**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಹುಕ್ಕೇರಿ**

**ಸಿಸಿ ನಂ ಃ 215/2021**
**ಸಿಡಬ್ಲ್ಯು ಃ 2**
**ಪಿಡಬ್ಲ್ಯು ಃ 3**

**ಹೆಸರು** ಃ ಬಸಪ್ಪಾ ಯಲ್ಲಪ್ಪಾ ಆಣೆ
**ವಯಾ** ಃ 52 ವರ್ಷ
**ಉದ್ಯೋಗ** ಃ ಕೂಲಿ ಕೆಲಸ
**ವಾಸ** ಃ ಬೀರನಾಳ ತಾಃ ಹುಕ್ಕೇರಿ

**(ದಿನಾಂಕಃ 05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಆರೋಪಿ ನನಗೆ ಗೂತ್ತಿಲ್ಲ. ಚಾಸಾ-3 ನಮ್ಮ ಊರಿನವನು. ನನಗೆ ಪರಿಚಯ. ಸುಮಾರು 10 ವರ್ಷಗಳ ಹಿಂದೆ ನಾನು ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ನನ್ನ ಜೊತೆಗೆ ಚಾಸಾ-3 ಸಹ ಆ ದಿನ ಆ ದಾಖಲೆಗೆ ಸಹಿ ಮಾಡಿದರು. ಸದರಿ ದಾಖಲೆ ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ರೇಡ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ 19-07-2014 ರಂದು ಸಂಜೆ 4-15 ರಿಂದ 5-15 ರ ವೆರೆಗೆ ಅಲಾನಿ ದಳ ಪೋಲಿಸರು ನನ್ನ ಮತ್ತು ಚಾಸಾ-3 ಇವರನ್ನು ಪಂಚರನ್ನಾಗಿ ಕರೆಸಿ ಜಾರಕಿಹೋಳಿ ಗ್ರಾಮದ ಸುಶೀಲವ್ವ ಸತ್ತೆಪ್ಪಗೋಳ ತನ್ನ ಮನೆಯ ಮುಂದೆ ಅನಧೀಕೃತವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾಗ ಅಲ್ಲಿಗೆ ಹೋಗಿ ದಾಳಿ ಮಾಡಿ ಆರೋಪಿ ಕಡೆಯಿಂದ ಒಂದು ಕರಿ

ರಬ್ಬರ ಟ್ಯೂಬಿನಲ್ಲಿ ಇದ್ದಂತಹ **18** ಲೀಟರಿನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ **10** ಲೀಟರಿನಷ್ಟು ಪ್ಲಾಸ್ಟಿಕ ಕ್ಯಾನ ಹಾಗಾ ಅದರಲ್ಲಿದ್ದ ಕಳ್ಳಭಟ್ಟಿ ಸಾರಾಯಿ ಹಾಗೂ ಪ್ಲಾಸ್ಟಿಕ ಗ್ಲಾಸಗಳನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ ತಮ್ಮ ವಶಕ್ಕೆ ಪಡೆದರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಯಾಂಪಲಗಾಗಿ **2** ಖಾಲಿ ಕ್ವಾಟರ ಬಾಟಲಿನಲ್ಲಿ ಸ್ಯಾಂಪಲ ನಮ್ಮ ಸಮಕ್ಷಮ ತೆಗೆದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮಗಳ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಪಿ ಎ ಪಿ ವಕೀಲರು ಏನೂ ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**